# [1]ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿಗಳ ಮತ್ತು ಜಿಲ್ಲಾ ಪಂಚಾಯಿತಿಗಳ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, 1998

(ಅಧಿಸೂಚನೆ ಸಂಖ್ಯೆ : ಗ್ರಾಅಪ 133 ಜಿಪಸ 2000, ದಿನಾಂಕ 26-4-2000 ಮತ್ತು ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ತಿದ್ದುಪಡಿಯಾಗಿದೆ.)

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ (1993ರ ಕರ್ನಾಟಕ ಅಧಿನಿಯಮ 14), ಪ್ರಕರಣ 311ರ ಉಪ-ಪ್ರಕರಣ (1)ರಲ್ಲಿ ಅಗತ್ಯಪಡಿಸಿರುವಂತೆ ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿಗಳ ಮತ್ತು ಜಿಲ್ಲಾ ಪಂಚಾಯಿತಿಗಳ ಸ್ಥಾನಗಳನ್ನು ಆವರ್ತನೆಯ ಮೇಲ ಮೀಸಲಿಡುವ) ನಿಯಮಗಳು, 1998ರ ಕರಡು ಅಧಿಸೂಚನೆ ಸಂಖ್ಯೆ : ಗ್ರಾಅಪ 149 ಜಿಪಸ 98, ದಿನಾಂಕ 21-8-1998ರ ಮೂಲಕ ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ 4, 2-ಸಿ(i)ರಲ್ಲಿ ದಿನಾಂಕ 21-8-1998ರಂದು ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ 30 ದಿವಸಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ದಿನಾಂಕ 21-8-1998ರಂದು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿಗೆ ಸಂಬಂಧಿಸಿದಂತೆ ನಿಗದಿತ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದೇ ಇರುವುದರಿಂದ;

ಈಗ, 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ (1993ರ ಕರ್ನಾಟಕ ಅಧಿನಿಯಮ 14), 311ನೇ ಪ್ರಕರಣದೊಂದಿಗೆ ಓದಲಾದಂತೆ ಸದರಿ ಅಧಿನಿಯಮದ ಪ್ರಕರಣಗಳು 123 ಮತ್ತು 162ನೇ (1)ರಿಂದ (3)ರವರೆಗಿನ ಉಪ-ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ.-

1. ಶೀರ್ಷಿಕೆ ಮತ್ತು ಪ್ರಾರಂಭ.-(1) ಈ ನಿಯಮಗಳನ್ನು ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿಗಳ ಮತ್ತು ಜಿಲ್ಲಾ ಪಂಚಾಯಿತಿಗಳ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, **1998** ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯ ಪತ್ರದಲ್ಲಿ ಅವನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.-ಈ ನಿಯಮಗಳಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು.-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14);

(ಬಿ) "ಪ್ರಕರಣ" ಎಂದರೆ ಈ ಅಧಿನಿಯಮದ ಒಂದು ಪ್ರಕರಣ.

---

1. ದಿನಾಂಕ 28-10-1998ರ ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ 4, 2-ಸಿ(i)ರಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಗ್ರಾಅಪ 149 ಜಿಪಸ 98, ದಿನಾಂಕ 26-10-1998.

3. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಆವರ್ತನೆ ಮೇಲೆ ಸ್ಥಾನಗಳ ಮೀಸಲಾತಿ.–[1][(1)(ಎ) [2][ರಾಜ್ಯ ಚುನಾವಣಾ ಆಯೋಗವು] ಜಿಲ್ಲಾ ಪಂಚಾಯಿತಿಯಲ್ಲಿ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಿದ ಸ್ಥಾನಗಳ ಪೈಕಿ, ಅನುಸೂಚಿತ ಪಂಗಡಗಳ ಜನಸಂಖ್ಯೆ ಹೆಚ್ಚು ಇರುವ ತಾಲ್ಲೂಕುಗಳಿಗೆ ಆಧ್ಯತೆಯನ್ನು ನೀಡಿ ಜಿಲ್ಲೆಯಲ್ಲಿರುವ ತಾಲ್ಲೂಕುಗಳಿಗೆ ಒಂದೊಂದು ಸ್ಥಾನವನ್ನು ಆವರ್ತನೆಯ ಮೂಲಕ ಹಂಚಿಕೆ ಮಾಡತಕ್ಕದ್ದು:

ಪರಂತು, ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು ಜಿಲ್ಲೆಯಲ್ಲಿಯ ತಾಲ್ಲೂಕುಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿದ್ದರೆ, ಈ ಖಂಡದ ಅಡಿಯಲ್ಲಿ ಹಂಚಿಕೆ ಮಾಡಿದ ತರುವಾಯ ಉಳಿದ ಸ್ಥಾನಗಳನ್ನು ಅನುಸೂಚಿತ ಪಂಗಡಗಳ ಜನಸಂಖ್ಯೆ ಹೆಚ್ಚು ಇರುವ ತಾಲ್ಲೂಕುಗಳಿಗೆ ಆದ್ಯತೆ ನೀಡಿ ಆ ತಾಲ್ಲೂಕುಗಳಿಗೆ ಮತ್ತೆ ಹಂಚಿಕೆ ಮಾಡತಕ್ಕದ್ದು:

ಮತ್ತು ಪರಂತು, ಒಂದು ತಾಲ್ಲೂಕಿನೊಳಗೆ ಇರುವ ಮತ ಕ್ಷೇತ್ರಗಳಿಗೆ ಅಂಥ ಸ್ಥಾನಗಳನ್ನು ಹಂಚಿಕೆ ಮಾಡುವಾಗ ಅನುಸೂಚಿತ ಪಂಡಗಳ ಜನಸಂಖ್ಯೆ ಹೆಚ್ಚು ಇರುವ ಮತ ಕ್ಷೇತ್ರಗಳಿಗೆ ಆದ್ಯತೆ ನೀಡತಕ್ಕದ್ದು:

[3][ಅಲ್ಲದೆ ಪರಂತು ಜಿಲ್ಲಾ ಪಂಚಾಯಿತಿಯಲ್ಲಿ ತಲಾ ಒಂದೊಂದು ಸ್ಥಾನದ ಮಟ್ಟಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು.]

(ಬಿ) ತಾಲ್ಲೂಕು ಪಂಚಾಯಿತಿಯಲ್ಲಿ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸಿದ ಸ್ಥಾನಗಳನ್ನು [4][ರಾಜ್ಯ ಚುನಾವಣಾ ಆಯೋಗವು] ತಾಲ್ಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಲಾಗಿ ಅನುಸೂಚಿತ ಪಂಗಡಗಳ ಜನಸಂಖ್ಯೆಯ ಶೇಕಡವಾರು ಅತಿ ಹೆಚ್ಚು ಇರುವಂಥ ಹಾಗೂ ಕಳೆದ ಪದಾವಧಿಯಲ್ಲಿ ಈಗಾಗಲೇ ಸ್ಥಾನಗಳನ್ನು ಅವರಿಗೆ ಹಂಚಿಕೆ ಮಾಡಿರದ ಮತ ಕ್ಷೇತ್ರಗಳಿಗೆ ಆವರ್ತನೆಯ ಮೇಲೆ ಹಂಚಿಕೆ ಮಾಡತಕ್ಕದ್ದು:]

[5][ಪರಂತು, ತಾಲ್ಲೂಕು ಪಂಚಾಯಿತಿಯಲ್ಲಿ ತಲಾ ಒಂದೊಂದು ಸ್ಥಾನದ ಮಟ್ಟಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು.]

(2) ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲಾದ ಸ್ಥಾನಗಳನ್ನು ಮೇಲಿನ ಒಂದನೇ ಉಪ-ನಿಯಮದಲ್ಲಿ ನಿರ್ದಿಷ್ಟವಾಗಿ ಹೇಳಿರುವ ರೀತಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರಿಗೆ ಆವರ್ತನೆ ಮೇರೆಗೆ [6][xxx] ಹಂಚಿಕೆ ಮಾಡತಕ್ಕದ್ದು.

1. (1)ನೇ ಉಪ-ನಿಯಮದ ಬದಲಾಗಿ ಅಧಿಸೂಚನೆ ಸಂಖ್ಯೆ : ಗ್ರಾಅಪ 133 ಜಿಪಸ 2000, ದಿನಾಂಕ 26-4-2000ದ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 3-4-2000ದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು

2. "ರಾಜ್ಯ ಸರ್ಕಾರವು" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ : ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 20-6-2006ರಿಂದ ಜಾರಿಗೆ ಬಂದಿದೆ

3. 3ನೇ ಪರಂತುಕವನ್ನು ದಿನಾಂಕ 20-6-2005ರ ಅಧಿಸೂಚನೆ ಸಂಖ್ಯೆ : ಗ್ರಾಅಪ 65 ಜಿಪಸ 2005ರ ಅನ್ವಯ ಸೇರಿಸಲಾಗಿದೆ ಮತ್ತು ಇದು ದಿನಾಂಕ 20-6-2005ರಿಂದ ಜಾರಿಗೆ ಬಂದಿದೆ

4. "ಡೆಪ್ಯುಟಿ ಕಮೀಷನರರು" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ : ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 20-6-2006ರಿಂದ ಜಾರಿಗೆ ಬಂದಿದೆ

5. ಪರಂತುಕವನ್ನು ದಿನಾಂಕ 20-6-2005ರ ಅಧಿಸೂಚನೆ ಸಂಖ್ಯೆ : ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ಸೇರಿಸಲಾಗಿದೆ ಮತ್ತು ಇದು ದಿನಾಂಕ 20-6-2005ರಿಂದ ಜಾರಿಗೆ ಬಂದಿದೆ

6. "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಅಧಿಸೂಚನೆ ಸಂಖ್ಯೆ : ಗ್ರಾಅಪ 133 ಜಿಪಸ 2000, ದಿನಾಂಕ 26-4-2000ದ ಅನ್ವಯ ಬಿಟ್ಟುಬಿಡಲಾಗಿದೆ ಮತ್ತು ಇದು ದಿನಾಂಕ 3-4-2000ದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು

(3) ಹಿಂದುಳಿದ ವರ್ಗಗಳಿಗೆ [1][xxx] ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಮೀಸಲಿರಿಸಿದ ಸ್ಥಾನಗಳನ್ನು [2][ರಾಜ್ಯ ಚುನಾವಣಾ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು] ಆವರ್ತನೆಯ ಮೇಲೆ ಹಂಚತಕ್ಕದ್ದು.

(4) (1), (2) ಮತ್ತು (3)ನೇ ಉಪ-ನಿಯಮಗಳಲ್ಲಿ ಹೇಳಲಾದ ಪ್ರತಿಯೊಂದು ಪ್ರವರ್ಗದಲ್ಲಿ ಮಹಿಳೆಯರಿಗೆ ಮೀಸಲಾದ ಸ್ಥಾನಗಳನ್ನು [3][ರಾಜ್ಯ ಚುನಾವಣಾ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು] ಆವರ್ತನೆಯ ಮೇಲೆ ಹಂಚತಕ್ಕದ್ದು:

ಪರಂತು, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಒಂದು ಮತಕ್ಷೇತ್ರದಲ್ಲಿನ ಒಂದು ಸ್ಥಾನವನ್ನು ಹಿಂದಿನ ಪದಾವಧಿಯಲ್ಲಿ (1), (2) ಅಥವಾ (3)ನೇ ಉಪ-ನಿಯಮಗಳಲ್ಲಿ ಹೇಳಲಾದ ಒಂದು ಪ್ರವರ್ಗಕ್ಕೆ ಅಥವಾ ಒಟ್ಟು ಮಹಿಳೆಗೆ ಹಂಚಿಕೆ ಮಾಡಲಾಗಿದ್ದರೆ [4][ರಾಜ್ಯ ಚುನಾವಣಾ ಆಯೋಗವು] ಮುಂಬರುವ ಪದಾವಧಿಯಲ್ಲಿ, ಆದಷ್ಟೂ ಆ ಮತ ಕ್ಷೇತ್ರದಲ್ಲಿ ಅದೇ ಪ್ರವರ್ಗಕ್ಕೆ ಅಥವಾ ಮಹಿಳೆಗೆ ಸ್ಥಾನವನ್ನು ಹಂಚಿಕೆ ಮಾಡತಕ್ಕದ್ದಲ್ಲ.

1. "ಮತ್ತು ಇತರ ಮೀಸಲಿರಿಸಿದ ಪ್ರವರ್ಗಗಳಿಗೆ" ಎಂಬ ಪದಗಳನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 133 ಜಿಪಸ 2000, ದಿನಾಂಕ ಭಾವಿಸತಕ್ಕದ್ದು 26-4-2000ದ ಅನ್ವಯ ಬಿಟ್ಟುಬಿಡಲಾಗಿದೆ ಮತ್ತು ಇದು ದಿನಾಂಕ 3-4-2000ದಿಂದ ಜಾರಿಗೆ ಬಂದಿರುವುದಾಗಿ

2. "ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಡೆಪ್ಯುಟಿ ಕಮೀಷನರರು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ: ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 20-6-2005ರಿಂದ ಜಾರಿಗೆ ಬಂದಿದೆ

3. "ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಡೆಪ್ಯುಟಿ ಕಮೀಷನರರು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ: ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 20-6-2005ರಿಂದ ಜಾರಿಗೆ ಬಂದಿದೆ

4. "ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಡೆಪ್ಯುಟಿ ಕಮೀಷನರರು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಅಧಿಸೂಚನೆ ಸಂಖ್ಯೆ: ಗ್ರಾಅಪ 65 ಜಿಪಸ 2005, ದಿನಾಂಕ 20-6-2005ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 20-6-2005ರಿಂದ ಜಾರಿಗೆ ಬಂದಿದೆ

1. ದಿನಾಂಕ 26-4-2000ದ ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ 4-ಎರಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ : ಗ್ರಾಅಪ 133